ಮೈಸೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿಗೆ.

ಮ್ಯುನಿಸಿಪಲ್ ಕಮಿಷನರು ಮತ್ತು ಆಡಿಟರವರ ರಿಪೋರ್ಟು:— 714

ತಾರೀಖು 22ನೆ ಡಿಸೆಂಬರ್ 1905.

I. ಸನ್ 1905ನೆ ಇಸವಿ ನವಂಬರ್ ಮಾಹೆ ಬಾಬತು ಜಮಾ ಖರ್ಚು ಲೆಕ್ಕಗಳನ್ನು ಆಡಿಟ್ ಮಾಡಲ್ಪಟ್ಟಿತು.

II. ಆಕ್ಟ್ರಾಯಿ ಬಾಬಿನಲ್ಲಿ ಕಳೆದ ಸಾಲಿಗಿಂತ ಈ ಸಾಲಿನಲ್ಲಿ ರೂ. 295—14-9 ಜಾಸ್ತಿಯಾಗಿ ಉತ್ಪತ್ತಿಯಾಗಿರುತ್ತೆ. ಆದರೆ ತೆಂಗಿನಕಾಯಿ, ವಿಳ್ಳೇದೆಲೆ, ಸಕ್ಕರೆ, ಆಡು, ಕುರಿ, ಎಂಜೆ, ಹರಳು, ಸಾಟು, ಇವುಗಳಲ್ಲಿ ಮಾತ್ರ ಹೋದ ಸಾಲಿಗಿಂತ ಈ ಸಾಲಿನಲ್ಲಿ ರೂ. 716—3—10 ಜಾಸ್ತಿಯಾಗಿರುತ್ತೆ. ಕೊಬರಿ, ಬೆಲ್ಲ, ತುಪ್ಪ, ಬೆಂಜೆ, ಜವಳಿ ಈ ಬಾಬಿನಲ್ಲಿ ರೂ. 518—11—1 ಕಮ್ಮಿಯಾಗಿರುತ್ತೆ.

III. ಮೊಹತರ್ಫಾದಲ್ಲಿ 2,268—0—0 ರೂಪಾಯಿಗಳು ಮಾತ್ರ ವಸೂಲಾಗಿರುತ್ತೆ. 40,765—1—6 ರೂಪಾಯಿಗಳು ನವಂಬರ್ ಅಖೈರಿಗೆ ಇನ್ನು ಬಾಕಿ ಇರುತ್ತೆ.

IV. ಖರ್ಚಾದ ಮೊಬಲಿಗ್ಯೆ ವೌಚರ್‌ಗಳೆಲ್ಲಾ ಸರಿಯಾಗಿರುತ್ತೆ.

ಸಿ. ವೆಂಕಟರಾವ್,
ಸೂಪರಿಂಟೆಂಡೆಂಟ್.